# ಅಂಬಲಿಯ ನೇಮ

ಬಸವಣ್ಣ ಭಕ್ತನೆಂದೇ ಖ್ಯಾತನಾದವನು. ಆದರೆ ಆತನ ಭಕ್ತಿ ಆಡಂಬರ ರಹಿತವಾದುದು. ಆದುದರಿಂದಲೇ 'ಭಕ್ತಿಯೆಂಬುದ ಮಾಡಲು ಬಾರದು' ಎಂದು ಅದರ ನಿಜವಾದ ಸ್ವರೂಪವನ್ನು ವ್ಯಾಖ್ಯಾನಿಸುತ್ತಾನೆ. ಭಕ್ತಿಯೆಂಬುದು ದೇವರೊಡನೆ ನಡೆಸುವ ತೀರಾ ಖಾಸಗಿಯಾದ ಅಂತರಂಗದ ಮಾನಸಿಕ ವ್ಯವಹಾರ; ಶಬ್ದಕ್ಕೆ ನಾಚುವಂಥದು, ತನ್ನ ಸತಿಯೊಡನೆ ನಡೆಸುವ ಅತ್ಯಂತ ಪ್ರಿಯವಾದ ಏಕಾಂತ ರತಿ ಸುಖದಂಥ ಕ್ರಿಯೆ. ಈ ಭಕ್ತಿಯ ಸ್ವರೂಪವನ್ನು ಬಹುಪಾಲು ಶರಣರು ಅರಿತಿದ್ದರು. ಅದೊಂದು ಅಂತರಂಗದ ಸಂಬಂಧವೆಂದು ಬಗೆದ ಶರಣರು ದೇವರೊಡನೆ ಇರುವ ಭಕ್ತಿಯನ್ನು ಗುಪ್ತವಾಗಿಟ್ಟು ಕೊಂಡಿರುತ್ತಿದ್ದರು. ಅದನ್ನು 'ಗುಪ್ತ ಭಕ್ತಿ'ಯೆಂದೇ ಗುರುತಿಸಲಾಗಿದೆ. ಅದು ತೋರಿಕೆಯಾಗಬಾರದು; ಪ್ರಕಟವಾಗಬಾರದು; ಪ್ರಚಾರವೂ ಆಗಬಾರದು. ಒಂದು ವೇಳೆ ಅದು ಪ್ರಕಟಗೊಂಡಲ್ಲಿ ಆಡಂಬರವಾಯಿತಲ್ಲಾ ಎಂದು ಪರಿತಪಿಸಿ ಆತ್ಮಹತ್ಯೆಗೆ ಎರಗುವ ಶರಣರ ಉದಾಹರಣೆಗಳೂ ಇವೆ. ಅನೇಕ ಸಂದರ್ಭಗಳಲ್ಲಿ ಶಿವನೇ ತನ್ನ ಭಕ್ತನ ಭಕ್ತಿಯ ಮಹಿಮೆಯನ್ನು ಜಗತ್ತಿಗೆ ಸಾರಲು ಪ್ರಕಟಿಸುತ್ತಾನೆ.

ದೇವರ ಆರಾಧನೆಗೆ ಸ್ಥಾಪಿತ ಸಮಾಜ ನಿಯಮ ರೀತಿ ರಿವಾಜುಗಳನ್ನು ರೂಪಿಸಿಕೊಂಡು ಬಿಡುತ್ತದೆ. ಈ ಬಗೆಯ ರೀತಿ ರಿವಾಜುಗಳು ರೂಪಿತಗೊಂಡಾಗಲೇ ಅಪಾಯಗಳು– ಸಂಕಷ್ಟಗಳು ಜನ್ಮತಾಳುತ್ತವೆ. ಇಂಥ ಪೂಜೆಗೆ ಇಂಥ ನಿಯಮಗಳೇ ಇರಬೇಕು; ಇಂಥ ದೇವರಿಗೆ ಇಂಥ ರಿವಾಜುಗಳೇ ಇರಬೇಕು. ಪೂಜೆಗಳಲ್ಲೂ ಅನೇಕ ವಿಧ. ಒಂದೇ ದೇವರಿಗೆ ಬಗೆ ಬಗೆಯ ಅಲಂಕಾರ, ಅರ್ಚನೆಗಳು; ಅದಕ್ಕೆ ತಕ್ಕನಾದ ಮಂತ್ರ ವಿಧಿಗಳು ಭಿನ್ನ. ಅದಕ್ಕೆ ಅನುಗುಣವಾಗಿ, ಭಕ್ತರ ಅಂತಸ್ತಿಗನುಗುಣವಾಗಿ ಪೂಜಾ ಖರ್ಚುಗಳು ಕೂಡ ಭಿನ್ನವಾಗುತ್ತವೆ. ದೇವರು ಕೂಡ ಭಕ್ತರ ಹಾಗೆ ಶ್ರೀಮಂತ ಅಥವಾ ಬಡವ ಎನ್ನಿಸಿಕೊಳ್ಳುತ್ತಾನೆ! ಅರ್ಚನೆಯ ಸ್ವರೂಪದ ಆಧಾರದ ಮೇಲೆ ಅವನೂ/ಳೂ ಕೂಡ ಸಸ್ಯಾಹಾರಿಯೋ ಮಂಸಾಹಾರಿಯೋ ಆಗಿ ರೂಪಿತವಾಗುತ್ತಾನೆ/ಳೆ. ಪೂಜೆಯ ನೇಮ ನಿಯಮಗಳು ಬಿಗಿಯಾಗಿ ಭಕ್ತರನ್ನೇ ಸುತ್ತಿಕೊಂಡು ಹಿಂಸಾಭರಣ ಆಗುತ್ತವೆ.

ಶರಣರ ಕಾಲದಲ್ಲು ಈ ಪೂಜಾ ನೇಮಗಳಿಗೇನು ಕೊರತೆಯಿರಲಿಲ್ಲ; ಆಡಂಬರದ ಮೆರವಣಿಗೆ ಇದ್ದೇ ಇತ್ತು. ಡಾಂಬಿಕತೆ ಧಾರ್ಮಿಕ ಆಚರಣೆಗಳಲ್ಲಿ ಮನೆ ಮಾಡಿತ್ತು. ಶರಣರು ಇಂಥ ಅರ್ಥ ಹೀನ ನೇಮಾದಿಗಳನ್ನು ವಿರೋಧಿಸಿದ್ದಾರೆ. ಸರಳ, ಶುದ್ಧ, ಆತ್ಮದ ಮೂಲಕ ಆಚರಿಸುವ ನೇಮದ ಬಗ್ಗೆ ಬಸವಣ್ಣನು ಹೀಗೆ ಅರಹುತ್ತಾನೆ:

ಹಾಲ ನೇಮ, ಹಾಲ ಕೆನೆಯ ನೇಮ,
ಕೆನೆ ತಪ್ಪಿದ ಬಳಿಕ ಕಿಚ್ಚಡಿಯ ನೇಮ,
ಬೆಣ್ಣೆಯ ನೇಮ, ಬೆಲ್ಲದ ನೇಮ!
ಅಂಬಲಿಯ ನೇಮದವರಾರನೂ ಕಾಣೆ–
ಕೂಡಲ ಸಂಗನ ಶರಣರಲ್ಲಿ
ಅಂಬಲಿಯ ನೇಮದಾತ ಮಾದಾರ ಚೆನ್ನಯ್ಯ.

ಆಡಂಬರದ, ತೋರಿಕೆಯ ಪೂಜೆ ಶರಣರಿಗೂ ಹೊರತಾದುದಲ್ಲವೆಂಬ ಸ್ವಸಮಾಜ ವಿಮರ್ಶೆ ಬಸವಣ್ಣನಲ್ಲಿತ್ತು ಎಂಬುದನ್ನು 'ಕೂಡಲ ಸಂಗನ ಶರಣರಲ್ಲಿ ಅಂಬಲಿಯ ನೇಮದವರಾರನೂ ಕಾಣೆ' ಎಂಬ ಮಾತಲ್ಲಿ ವ್ಯಕ್ತವಾಗಿರುವುದನ್ನು ಕಾಣಬಹುದು. ಬಸವಣ್ಣ ಸಮಾಜದ ಎಲ್ಲ ಮಗ್ಗಲುಗಳನ್ನು ಸೂಕ್ಷ್ಮವಾಗಿ ಗಮನಿಸಿದವನು; ಅತ್ಯಂತ ಸೂಕ್ಷ್ಮ ಮತಿಯೂ, ನಿರಾಡಂಬರ ಪ್ರಿಯನೂ, ನಿಜಭಕ್ತಿ ಗುಣಗ್ರಾಹಿಯೂ ಆಗಿದ್ದವನು. ವಿವಿಧ ನೇಮಗಳಲ್ಲಿ ಶಿವನನ್ನು ಅರ್ಚಿಸುವ– ತನ್ಮೂಲಕ ಸ್ವಪ್ರತಿಷ್ಠೆಯನ್ನು ತೋರಿಸುವ ಜನರ ನಡುವೆ ಸಾಮಾನ್ಯತೆಯನ್ನು ಗುರುತಿಸುವ ಪ್ರಯತ್ನವನ್ನು ಬಸವಣ್ಣ ಮಾಡುತ್ತಾನೆ. ಅದು ಅಂಬಲಿಯ ಮೂಲಕ ಅಭಿವ್ಯಕ್ತಗೊಳ್ಳುತ್ತದೆ. 'ಅಂಬಲಿ' ಸಾಮಾನ್ಯತೆಯ– ಸರಳತೆಯ, ತಳಪದರದ ಸಂಕೇತ. ಅಷ್ಟೇ ಅಲ್ಲ, ಈ ನೆಲದ ಸತ್ವದ ಸಂಕೇತ. ಬಸವಾದಿ ಪ್ರಮಥರ ಪೂರ್ವದಿಂದ ಇಂದಿನವರೆಗೂ ನಮ್ಮ 'ಸಾಮಾನ್ಯತೆ' ಕುಡಿದು ಬದುಕುತ್ತಿರುವುದು ಈ ಅಂಬಲಿಯನ್ನೇ! ಅಂಬಲಿ ಈ ನೆಲದ ಆಹಾರ. ತನ್ನ ನಿಜಭಕ್ತರು ಸೇವಿಸಿ ಬದುಕುತ್ತಿರುವ ಅಂಬಲಿಯನ್ನು ನೇಮದಲ್ಲಿ ಸ್ವೀಕರಿಸಲು ಶಿವನಿಗೂ ಆನಂದವಾಗುತ್ತದೆ ಎಂಬುದು ಬಸವಣ್ಣನ ಇಂಗಿತ.

ಬಸವಣ್ಣನ ದೃಷ್ಟಿಯಲ್ಲಿ ಬದುಕಿನ ಶುದ್ಧ ನಡೆಯೇ ನಿಜವಾದ ನೇಮ. ಅದನ್ನು ಅವನು ಹೀಗೆ ಗುರುತಿಸುತ್ತಾನೆ: 'ಬಂದುದ ಕೈಕೊಳ್ಳಬಲ್ಲಡೆ ನೇಮ! ಇದ್ದುದ ವಂಚನೆಯ ಮಾಡದಿದ್ದಡೆ ನೇಮ! ನಡೆದು ತಪ್ಪದಿದ್ದರೆ ಅದು ನೇಮ! ನುಡಿದು ಹುಸಿಯದಿದ್ದಡೆ ಅದು ಮುನ್ನವೆ ನೇಮ!' ಇದಕ್ಕಿಂತ ಸರಳವಾಗಿ ಬದುಕಬೇಕಾದ ಬಗೆಯನ್ನು ಹೇಳಲು ಸಾಧ್ಯವಿಲ್ಲ. ಇಂದು ನಮ್ಮ ಧಾರ್ಮಿಕ ಗುರುಗಳ ಭೋಗ ಜೀವನ, ಅವರ ಐಷಾರಾಮಿ ಕಾರುಗಳು– ಹೆಲಿಕಾಪ್ಟರ್‌ಗಳು; ಅರಮನೆಗಳನ್ನು ನಾಚಿಸುವಂಥ ಹವಾ ನಿಯಂತ್ರಿತ ಆಶ್ರಮ (ಮಹಲು)ಗಳು; ದೇಶ ವಿದೇಶಗಳ ಲೋಕ ಸಂಚಾರ ಹಾಗೂ ಅವರು ಅದ್ದೂರಿಯಾಗಿ ನಡೆಸುವ ಯಜ್ಞಯಾಗ ಪೂಜೆ ಪುನಸ್ಕಾರಗಳನ್ನು ಅವಲೋಕಿಸಿದರೆ ನಮ್ಮ ಬದುಕು ಸಾಗುತ್ತಿರುವ ಅಧಃಪತನದ ದಿಕ್ಕನ್ನು ಸೂಚಿಸುತ್ತದೆ. ಅಧ್ಯಾತ್ಮ ಧ್ಯಾನ ಮುಂತಾದ ದೊಡ್ಡ ಶಬ್ದಗಳ ಮರೆಯಲ್ಲಿ ಶ್ರೀಮಂತ ಭಕ್ತರ ಅಡ್ಡದಾರಿಗಳಿಗೆ ಪ್ರೋತ್ಸಾಹ ನೀಡುತ್ತಿರುವ ಧಾರ್ಮಿಕ ಕ್ಷೇತ್ರಕ್ಕೆ ಅಗತ್ಯವಾಗಿ ಕಾಯಕಲ್ಪ ಬೇಕಾಗಿದೆ.

ಇಂಥ ಇಂದಿನ ಕಾಲಘಟ್ಟದಲ್ಲಿ ಉಸಿರಾಡುತ್ತಿರುವ ನಮಗೆ ಮಾದಾರ ಚೆನ್ನಯ್ಯನ ಅಂಬಲಿಯ ನೇಮ ಆದರ್ಶ ನಡೆಯಾಗಬೇಕಾಗಿದೆ.

■ ಶಿಕಾಕು

## ಮಾತೇ ಮುತ್ತು

★ ಮನುಷ್ಯನು ತಾನು ಮಾಡಿದ ಅಧರ್ಮವನ್ನು ಕುರಿತು ಮುಕ್ತವಾಗಿ ಹೇಳಿಕೊಂಡಂತೆಲ್ಲಾ, ಹಾವು ಪೊರೆಯಿಂದ ಬಿಡುಗಡೆ ಹೊಂದುವಂತೆ– ಅಧರ್ಮದ ಪಾಪದಿಂದ ಬಿಡುಗಡೆ ಹೊಂದುತ್ತಾನೆ.
–ಮನುಸ್ಮೃತಿ

★ ಬ್ರಾಹ್ಮಣರನ್ನು ಪೂಜಿಸುವ ಕೈಗಳು ಹಾಗೂ ಶೂದ್ರರನ್ನು ಒದೆಯುವ ಕಾಲುಗಳು ಜತೆಯಲ್ಲೇ ಇರುತ್ತವೆ.
–ರಾಮ ಮನೋಹರ ಲೋಹಿಯಾ

★ ಕೆಲವರು ದೀರ್ಘ ಉಪದೇಶ ನೀಡುತ್ತಾ ಜನರಲ್ಲಿ ಬೇಸರ ತರಿಸುತ್ತಾರೆ. ಕೇಳುಗರ ಶಕ್ತಿ ತುಂಬ ನಾಜೂಕಾದದ್ದು. ಅದು ಬೇಗ ಬಳಲುತ್ತದೆ ಮತ್ತು ಮರೆಯುತ್ತದೆ.
–ಡಿ.ವಿ.ಗುಂಡಪ್ಪ

★ ಸಂತೆಯಲ್ಲಿದ್ದು ಏಕಾಂತತೆಯತ್ತ ಮುಖ ಮಾಡುವುದು ಸಜ್ಜನರ ಲಕ್ಷಣ.
–ಗಳಗನಾಥ

★ ಹಣದಿಂದ ಹಸಿವು ಹೆಚ್ಚುತ್ತದೆಯೇ ಹೊರತು ತೃಪ್ತಿ ಸಿಕ್ಕಲಾರದು.
–ಪ್ರೇಮ್‌ಚಂದ್

★ ಶ್ರದ್ಧೆಯ ಅರ್ಥ ಮೂಢನಂಬಿಕೆಯಲ್ಲ.
–ಸ್ವಾಮಿ ವಿವೇಕಾನಂದ

★ ಮನುಷ್ಯ ಒತ್ತಡದಲ್ಲಿದ್ದಾಗ ಮಾಡುವ ಆಯ್ಕೆಯಿಂದ ಆತನ ವ್ಯಕ್ತಿತ್ವವನ್ನು ಅಳೆಯುವುದು ಸಾಧ್ಯ.
–ಚರ್ಚಿಲ್

★ ತನ್ನ ಕೋಪವನ್ನು ನಿಯಂತ್ರಣದಲ್ಲಿಟ್ಟುಕೊಂಡವನೇ ಸ್ವರ್ಗದ ಅಧಿಪತಿ.
–ಕುರಾನ್

★ ಧರ್ಮ ವ್ಯಾಪಾರವಲ್ಲ, ಅದೊಂದು ಮನೋಧರ್ಮ. ಅದರಲ್ಲಿ ಬಲವಾದ ನಂಬಿಕೆ ಇದ್ದಾಗ ಪ್ರಯೋಜನ ಆಗಬಹುದು.
–ಧರ್ಮರಾಯ

★ ಸಂಗೀತ ಆತ್ಮದ ಔಷಧಿಯಿದ್ದಂತೆ ಆತ್ಮದ ಅಶಾಂತಿಯನ್ನು ಕಳೆದು ಶಾಂತಿಯನ್ನು ದಯಪಾಲಿಸುತ್ತದೆ.
–ಭೀಮಸೇನ ಜೋಶಿ

★ ಪರಿಸ್ಥಿತಿಗಳನ್ನು ಹಾಗೆಯೇ ಬಿಟ್ಟುಬಿಟ್ಟರೆ ಅದು ಎಂದಿಗೂ ಸರಿ ಹೊಂದುವುದಿಲ್ಲ.
–ಚದುರಂಗ